# 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತಿಪಟೂರು

# ಎಸ್.ಸಿ ಸಂಖ್ಯೆಃ 10039/2019

**ಪ್ರಮಾಣೀಕರಿಸಿದ ದಿನಾಂಕಃ 27/01/2020**

**ಚಾಸಾ.4**

**ಪ್ರಾಸಾ.1**

| | |
|---|---|
| ಹೆಸರು | ಶ್ರೀ. ಅಶೋಕ್ |
| ತಂದೆ ಹೆಸರು | ಶಿವಣ್ಣ |
| ವಯಸ್ಸು | 43 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ತಂಡಗ, ತುರುವೇಕೆರೆ ತಾಲ್ಲೂಕು. |

## ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ-1 ರಿಂದ ಚಾಸಾ-3 ರವರು ಗೊತ್ತು, ಚಾಸಾ-6 ರಿಂದ ಚಾಸಾ-8 ರವರು ಗೊತ್ತು, ನ್ಯಾಯಾಲಯದ ಮುಂದಿರುವ ಆರೋಪಿ ಸಹ ಗೊತ್ತು, ಮೃತ ಸುರೇಶ ಗೊತ್ತು, ಆರೋಪಿ ಮತ್ತು ಮೃತ ಸುರೇಶ ಇಬ್ಬರು ನಮ್ಮ ಊರಿನ ನಿವಾಸಿಗಳು. ಆರೋಪಿ ಮತ್ತು ಮೃತ ಸುರೇಶ ಇಬ್ಬರೂ ಕೃಷಿ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಆದರೆ, ಅವರಿಬ್ಬರು ಬೇರೆ ಏನು ಕೆಲಸ ಮಾಡುತ್ತಿದ್ದರು ಅಂತ ಗೊತ್ತಿಲ್ಲ, ಚಾಸಾ-1 ಸುಮ ಮೃತ ಸುರೇಶನ ಹೆಂಡತಿ. ಅವರಿಗೆ ಒಬ್ಬ ಗಂಡು ಮಗ ಇದ್ದಾನೆ. ಈಗ್ಗೆ ಒಂದು ವರ್ಷದ ಹಿಂದೆ ಸುರೇಶ ಮೃತಪಟ್ಟಿದ್ದಾನೆ. ಒಂದು ವರ್ಷದ ಹಿಂದೆ ಒಂದು ದಿನ ತಂಡಗ ಗ್ರಾಮದಲ್ಲಿರುವ ರಾಮಮಂದಿರದ ಹತ್ತಿರ ಸುರೇಶ ಮೃತಪಟ್ಟಿದ್ದನು. ನಾನು ಸಹ ಅಲ್ಲಿಗೆ ಹೋಗಿ ನೋಡಿದ್ದೇನೆ. ಆದರೆ, ಆತ ಯಾವ ರೀತಿ ಮತ್ತು ಯಾವ ಕಾರಣದಿಂದ ಮೃತಪಟ್ಟಿದ್ದನು ಅಂತ ನನಗೆ ಗೊತ್ತಿಲ್ಲ, ನಾನು

ಅಲ್ಲಿಗೆ ಹೋಗುವಷ್ಟರಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದರು. ಆಗ ಪೊಲೀಸರು ಊರಿನ ಜನರ ಹೇಳಿಕೆ ಪಡೆದುಕೊಂಡು ಮೃತದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಮೊದಲಿನಿಂದಲೂ ಆರೋಪಿ ಮತ್ತು ಮೃತ ಸುರೇಶ ವಿಶ್ವಾಸದಿಂದ ಇದ್ದರು. ಯಾವ ವಿಚಾರಕ್ಕಾಗಿ ಅವರಿಬ್ಬರ ನಡುವೆ ಏನು ಘಟನೆ ನಡೆದಿತ್ತು ಅಂತ ನನಗೆ ಗೊತ್ತಿಲ್ಲ. ಸದರಿ ಘಟನೆಯನ್ನು ನಾನು ಯಾವಾಗಲೂ ನೋಡಿಲ್ಲ. ಆರೋಪಿ ಮತ್ತು ಮೃತನ ನಡುವೆ ಗಲಾಟೆಯಾಗಿದ್ದ ವಿಚಾರ ನನಗೆ ಗೊತ್ತಿಲ್ಲ. ಅದೇ ರೀತಿ ಅವರಿಬ್ಬರ ನಡುವೆ ರಾಜಿ ಸಂಧಾನ ಆಗಿದ್ದ ವಿಚಾರ ಯಾವುದೂ ನನಗೆ ಗೊತ್ತಿಲ್ಲ. ಅವರಿಬ್ಬರ ನಡುವೆ ಯಾವುದೇ ವಿಚಾರದಲ್ಲಿ ದ್ವೇಷ ಇರಲಿಲ್ಲ. ಹಳೆಯ ದ್ವೇಷ ಇಟ್ಟುಕೊಂಡು ಆರೋಪಿ ಮೃತ ಸುರೇಶನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದಾನೆ ಎಂಬುದಾಗಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಬಟ್ಟೆಗಳನ್ನು ಅಮಾನತುಪಡಿಸಿಕೊಂಡಿಲ್ಲ.

***(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ)***

## ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಆರೋಪಿ ಮತ್ತು ಮೃತ ಸುರೇಶ ಇಬ್ಬರು ನಮ್ಮ ಗ್ರಾಮದ ಮತ್ತು ಅಕ್ಕಪಕ್ಕದ ಗ್ರಾಮದ ಕೆರೆಗಳನ್ನು ಪಾರ್ಟ್‌ನರ್ ಆಗಿ ಹರಾಜು ಮಾಡಿಕೊಂಡು ಮೀನು ಬಿಟ್ಟು ಸಾಕಿಕೊಂಡು ಮಾರಾಟ ಮಾಡುತ್ತಿದ್ದರು ಎಂದರೆ - ನನಗೆ ಗೊತ್ತಿಲ್ಲ. ದಿನಾಂಕಃ 17/02/2019 ರಂದು ಬೆಳಿಗ್ಗೆ 7-30 ಗಂಟೆಗೆ ನಾನು ಮನೆಯ ಹತ್ತಿರ ಇದ್ದಾಗ ಸುರೇಶ ನಮ್ಮ ಊರಿನ ಶ್ರೀರಾಮಮಂದಿರ ಮುಂಭಾಗ ತಲೆಯಲ್ಲಿ ರಕ್ತಗಾಯ ಆಗಿ ಸತ್ತು ಹೋಗಿರುತ್ತಾನೆ ಎಂಬುದಾಗಿ ವಿಷಯ ತಿಳಿದು ನಾನು ಸಹ ಹೋಗಿ ನೋಡಿರುತ್ತೇನೆ

ಎಂದರೆ - ಸರಿ. ಮೃತ ಸುರೇಶನ ತಲೆಯ ಎಡಭಾಗದಲ್ಲಿ ತೀವ್ರತರದ ಪೆಟ್ಟು ಬಿದ್ದು ರಕ್ತ ಹೊರ ಬಂದು ಬಟ್ಟೆಯ ಮೇಲೆ, ಗೋಡೆಯ ಮೇಲೆ ಬಿದ್ದಿದ್ದು, ಆತನ ಸಾವಿನಲ್ಲಿ ಅನುಮಾನ ಸಹ ಕಂಡು ಬಂದಿದ್ದು, ನಂತರ ಮೃತ ಸುರೇಶನ ಹೆಂಡತಿ ತುರುವೇಕೆರೆ ಪೊಲೀಸ್ ಠಾಣೆಯಲ್ಲಿ ಸಾವಿನ ಬಗ್ಗೆ ಅನುಮಾನವಿದ್ದು, ಕ್ರಮ ಕೈಗೊಳ್ಳಿ ಎಂಬುದಾಗಿ ದೂರು ನೀಡಿದ ಮೇರೆಗೆ ಕೇಸು ದಾಖಲಾಗಿ ತನಿಖೆ ನಡೆದಿರುತ್ತದೆ ಎಂದರೆ - ನನಗೆ ಗೊತ್ತಿಲ್ಲ. ದಿನಾಂಕಃ 19/02/2019 ರಂದು ಪೊಲೀಸರು ವೈದ್ಯರ ಅಭಿಪ್ರಾಯದ ಮೇರೆಗೆ ಕೊಲೆ ಪ್ರಕರಣವಾಗಿ ಕೇಸು ದಾಖಲು ಮಾಡಿ ತನಿಖೆ ಕೈಗೊಂಡಿದ್ದಾರೆ ಎಂಬುದಾಗಿ ಗೊತ್ತಾಯಿತು ಎಂದರೆ - ಸರಿಯಲ್ಲ. ದಿನಾಂಕಃ 01/03/2019 ರಂದು ತುರುವೇಕೆರೆ ಪೊಲೀಸರು ಸುರೇಶನ ಕೊಲೆ ಕೇಸಿನ ಸಂಬಂಧ ಆರೋಪಿಯನ್ನು ಪತ್ತೆ ಮಾಡಿದ್ದಾರೆ ಎಂಬ ವಿಚಾರ ತಿಳಿಯಿತು ಎಂದರೆ - ಸರಿ.

ಈಗ್ಗೆ 5-6 ವರ್ಷಗಳ ಹಿಂದೆ ಆರೋಪಿ ಮತ್ತು ಮೃತ ಸುರೇಶ ಇಬ್ಬರಿಗೂ ಹೊಸೂರು ಹುಲ್ಲೇನಹಳ್ಳಿ ಹತ್ತಿರ ಕೆರೆ ಹರಾಜು ವಿಚಾರದಲ್ಲಿ ಆರೋಪಿ ವಿಚಾರ ತಿಳಿಸದೇ ಮೋಸ ಮಾಡಿದ್ದಾನೆ ಎಂಬ ವಿಚಾರದಲ್ಲಿ ಒಂದು ಬಾರಿ ಆರೋಪಿಯನ್ನು ಸುರೇಶ ಮನೆಯ ಹತ್ತಿರ ಕರೆದು ಹೊಡೆದು ಬೈದು ಗಲಾಟೆ ಮಾಡಿದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ - ಸರಿಯಲ್ಲ. ಈಗ್ಗೆ ಸುಮಾರು 5-6 ವರ್ಷಗಳ ಹಿಂದೆ ತಾರೀಖು 22/09/2013 ರಂದು ಸಾಯಂಕಾಲ 7-00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-5 ವಸಂತ ಎಂಬುವವರು ಜಯರಾಮಯ್ಯ ಎಂಬುವವರ ಬೇಕರಿ ಹತ್ತಿರ ಇರುವಾಗ ಸುರೇಶ ಬ್ರೆಡ್ ತೆಗೆದುಕೊಳ್ಳಲು ಬಂದಾಗ ಆರೋಪಿಯು ಸುರೇಶನ ಮೇಲೆ ಜಗಳ ತೆಗೆದು ಕೆಟ್ಟ ಮಾತುಗಳಿಂದ ಬೈದು ನನ್ನನ್ನು ಮೀನು ಹಿಡಿಯಲು ಕರೆದುಕೊಂಡು ಹೋಗಲಿಲ್ಲ ಎಂದು ಕಲ್ಲಿನಿಂದ ಹೊಡೆದು, ಹಲ್ಲಿನಿಂದ ಎದೆಗೆ ಕಚ್ಚಿ ರಕ್ತಗಾಯಪಡಿಸಿದನು ಎಂದರೆ - ನಾನು ನೋಡಿಲ್ಲ. ನಂತರ ನಾನು

ಮತ್ತು ಚಾಸಾ-5 ಇಬ್ಬರು ಸುರೇಶನನ್ನು 108 ಅಂಬ್ಯುಲೆನ್ಸ್ ವಾಹನದಲ್ಲಿ ತುರುವೇಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ನಂತರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದು, ಈ ಬಗ್ಗೆ ಕೇಸು ಹಾಕಿಸಿದ್ದು, ಅಂದಿನಿಂದಲೂ ಆರೋಪಿಯು ಸುರೇಶನ ಮೇಲೆ ದ್ವೇಷ ಸಾಧಿಸುತ್ತಿದ್ದು, ನಂತರ ನಾನು, ಚಾಸಾ-5 ಮತ್ತು ಚಾಸಾ-6 ಸಿದ್ಧಲಿಂಗಪ್ಪ ರವರು ಸೇರಿಕೊಂಡು ರಾಜಿ ಸಂಧಾನ ಮಾಡಿದ್ದು, ಆರೋಪಿಯಲ್ಲಿ ನ್ಯಾಯಾಲಯದಲ್ಲಿ ರೂ.500/- ದಂಡ ಕಟ್ಟಿ ಕೇಸು ತೀರ್ಮಾನ ಮಾಡಿಕೊಂಡರು ಎಂದರೆ - ನನಗೆ ಗೊತ್ತಿಲ್ಲ. ಇದಾದ 15-20 ದಿನಗಳಲ್ಲಿ ಮೃತ ಸುರೇಶ ನನ್ನ ಹತ್ತಿರ ಗೋವಿಂದರಾಜು ಸಾದರಹಳ್ಳಿ ಹತ್ತಿರ ಕೆರೆಯ ನೀರು ಹೋಗುವ ಹಳ್ಳದಲ್ಲಿ ಬಲೆ ಹಾಕಿ ಮೀನು ಹಿಡಿಯುತ್ತಿದ್ದು, ನಾನು ನೋಡಿ ಕೇಳಿದ್ದು, ಇತ್ತೀಚೆಗೆ ಆರೋಪಿಯು ನನ್ನ ಮೇಲೆ ಈ ಹಿಂದೆ ನಮ್ಮೂರಿನಲ್ಲಿ ನಡೆದ ಗಲಾಟೆಯಿಂದ ದ್ವೇಷ ಸಾಧಿಸುತ್ತಿದ್ದು ...............................................ನಾನು, ಚಾಸಾ-5 ಮತ್ತು ಚಾಸಾ-6 ರವರು ಈ ಹಿಂದೆ ಬುದ್ಧಿ ಹೇಳಿದ ಹಾಗೆ ಬುದ್ಧಿ ಹೇಳಿದರಾಯಿತು ಎಂದು ಹೇಳಿದ್ದೆವು ಎಂದರೆ - ಸರಿಯಲ್ಲ. ನಂತರ ವಿಚಾರ ತಿಳಿಯಲಾಗಿ ದಿನಾಂಕಃ 16/02/2019 ರಂದು ಸುರೇಶ ರಾತ್ರಿ ಮನೆಯಲ್ಲಿ ಊಟ ಮಾಡಿ ಯಾವುದೋ ಫೋನ್ ನಲ್ಲಿ ಮಾತನಾಡಿ ರಾತ್ರಿ 8-00 ಗಂಟೆಯಲ್ಲಿ ಗಾಡಿ ತೆಗೆದುಕೊಂಡು ಹೋದವನು ರಾತ್ರಿ 9-00 ಗಂಟೆ ಸಮಯದಲ್ಲಿ ನಮ್ಮ ಊರಿನ ರಾಮಮಂದಿರದ ಬಳಿ ಮೃತ ಸುರೇಶ ಮತ್ತು ಆರೋಪಿಯ ನಡುವೆ ಗಲಾಟೆಯಾಗಿ ಆರೋಪಿಯ ಹಿಂದಿನ ದ್ವೇಷದಿಂದ ಸುರೇಶನಿಗೆ ಒಂದು ಮರದ ರಿಪೀಸ್ ದೊಣ್ಣೆಯಿಂದ ಎಡಭಾಗದ ತಲೆಗೆ ಹೊಡೆದು ಸ್ಥಳದಲ್ಲಿಯೇ ಸಾಯಿಸಿರುತ್ತಾನೆ ಎಂದರೆ - ನನಗೆ ಗೊತ್ತಿಲ್ಲ. ಮೃತ ಸುರೇಶ ಈ ಹಿಂದೆ ಆರೋಪಿಯ ಮೇಲೆ ಗಲಾಟೆಯ ವಿಚಾರದಲ್ಲಿ

ಪೊಲೀಸ್ ಕೇಸು ಹಾಕಿಸಿದ್ದಾನೆ ಅಂತ, ಆರೋಪಿಗೆ ಸುರೇಶ ಕೆರೆಗಳಲ್ಲಿ ಮೀನು ಹಿಡಿಯಲು ಕರೆಯುತ್ತಿಲ್ಲವೆಂತ, ಆರೋಪಿಗೆ ಮೀನು ಹಿಡಿಯಲು ತೊಂದರೆ ಕೊಡುತ್ತಾರೆ ಅಂತ ರಾತ್ರಿ ಸಮಯದಲ್ಲಿ ಸುರೇಶನು ಆರೋಪಿಯನ್ನು ಬೇಟೆಗೆ ಕರೆದುಕೊಂಡು ಹೋಗುವುದಿಲ್ಲ ಎಂಬ ಹಿಂದಿನ ದ್ವೇಷದಿಂದ ಮತ್ತು ಸಾಯಿಸುವ ಉದ್ಧೇಶದಿಂದ ಆರೋಪಿಯು ಮೃತ ಸುರೇಶನನ್ನು ದಿನಾಂಕಃ 16/02/2019 ರಂದು ರಾತ್ರಿ ಸುಮಾರು 9-15 ಗಂಟೆ ಸಮಯದಲ್ಲಿ ರಾಮಮಂದಿರದ ಹತ್ತಿರ ತಲೆಗೆ ರಿಪೀಸ್ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುತ್ತಾರೆ ಎಂಬುದಾಗಿ ಈಗ ನನಗೆ ಓದಿ ಹೇಳಿದ ರೀತ್ಯಾ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ - ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-1 ಎಂಬುದಾಗಿ ನಿಶಾನಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಡಿ ವಕೀಲರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ನುಡಿದಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಶಿವಕುಮಾರ.ಬಿ)**
**5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**